## ಎಸ್.ಎಲ್.ಡಿ.ಪಿ/ಎಸ್.ಎಲ್.ಡಿ.ಎಫ್.ಪಿ - ಶೈಕ್ಷಣಿಕ ನಾಯಕತ್ವ
## ಪ್ರಭಾವವಲಯ ಮತ್ತು ಕಾಳಜಿವಲಯ

### ನೀರಿನ ಟ್ಯಾಂಕಿನ ಪೈಪು ಒಡೆದು ಉಂಟಾಗುತ್ತಿರುವ ಅಡೆತಡೆ ಪ್ರಕರಣದ ವಿವರಣೆ

**ಸನ್ನಿವೇಶ:**

ಒಂದು ಚಿಕ್ಕ ಗ್ರಾಮ, ಅಲ್ಲಿ ಒಂದು ದೊಡ್ಡ ನೀರಿನಟ್ಯಾಂಕು ಇರುತ್ತದೆ. ಆ ಊರಲ್ಲಿ ಇದೊಂದೆ ನೀರಿನಟ್ಯಾಂಕು. ಒಂದು ಸಲ ನೀರು ಸರಬರಾಜು ಆಗುವ ಪೈಪು ಒಡೆದು ಹೋಗುತ್ತದೆ. ಇದರಿಂದ ಜನರಿಗೆ ನೀರಿನ ಸಮಸ್ಯೆ ಉಂಟಾಗಿ, ಊರಲ್ಲಿರುವ ಮಹಿಳೆಯರು ಬೇರೆ ಬೇರೆ ಮೂಲಗಳಿಂದ ಅಡಿಗೆಗೆ ಮತ್ತು ಬಳಸಲು ನೀರು ತರುವ ಪರಿಸ್ಥಿತಿ ಉದ್ಭವವಾಗುತ್ತದೆ. ಇಂಥಹ ಪರಿಸ್ಥಿತಿಯಲ್ಲಿ ಏನು ಮಾಡಬಹುದು? ಹಳ್ಳಿಯವರಾಗಿ ತಾವು ಏನು ಮಾಡಿದರೆ ಸಮಸ್ಯೆ ಪರಿಹಾರ ಆಗುತ್ತದೆ ಎಂದು ಹೇಳುತ್ತೀರಿ ಎಂದುಪ್ರಶ್ನಿಸುತ್ತಾ ಕಲಿಕಾರ್ಥಿಗಳಿಂದ ಪರಿಹಾರೋಪಾಯಗಳನ್ನು ಕೇಳುವ ಮೂಲಕ ಪಟ್ಟಿಮಾಡುವುದು.

**ಸೂಚಿತ ಸೂಕ್ತ ಪರಿಹಾರ:**

| ತ್ರೀಫ್ರ/ತಾತ್ಕಾಲಿಕ ಪರಿಹಾರ | ಮಧ್ಯಮ ಪರಿಹಾರ | ಶಾಶ್ವತ ಪರಿಹಾರ |
|---|---|---|
| • ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ತಾತ್ಕಾಲಿಕವಾಗಿ ರಿಪೇರಿ ಮಾಡುವುದು | • ಸಂಬಂಧ ಪಟ್ಟ ಇಲಾಖೆಗೆ ದೂರು ನೀಡುವುದು<br>• ಗ್ರಾಮ್ ಪಂಚಾಯತ್ ವಾಟರ್‌ಮ್ಯಾನ ಮೂಲಕ ದುರಸ್ಥಿ ಕಾರ್ಯ ಮಾಡಿಸುವುದು.<br>• ಯುವಕ ಸಂಘದ ಮೂಲಕ ಹೊಸ ಪೈಪಿನ ವ್ಯವಸ್ಥೆ | • ಪೈಪು ಒಡೆದಿರುವುದಕ್ಕೆ ಕಾರಣ ಗುರುತಿಸಿ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವುದು. .<br>• ಬಳಕೆ ಮತ್ತು ಸಂರಕ್ಷಣೆ ಕುರಿತು ಸಮುದಾಯದಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸುವುದು |

- **ಈ ಮೇಲಿನ ಪರಿಹಾರಗಳನ್ನು ಸುಗಮಕಾರರು ಬಳಸಿಕೊಳ್ಳಬಹುದು**

**ಸೂಚನೆ:** ಈ ಮೇಲೆ ವಿವರಿಸಲಾದ ಪ್ರಸಂಗದ ವಿವರಣೆಯನ್ನು ಕಲಿಕಾರ್ಥಿಗಳೊಂದಿಗೆ ಹಂಚಿಕೊಳ್ಳುವುದು ನಂತರ ಕಲಿಕಾರ್ಥಿಗಳು ವ್ಯಕ್ತಪಡಿಸುವ ಪರಿಹಾರಗಳನ್ನು ಪಟ್ಟಿಮಾಡುವುದು. ಸೂಕ್ತ ಪರಿಹಾರಗಳು ಕಲಿಕಾರ್ಥಿಗಳಿಂದ ಬಂದರೆ ಅದನ್ನು ಕ್ರೋಢಿಕರಿಸಿ ವಿವರಿಸುವುದರ ಮೂಲಕಪ್ರಭಾವವಲಯ ಪರಿಕಲ್ಪನೆಯನ್ನು ಸ್ಪಷ್ಟಪಡಿಸುವರು. ಒಂದು ವೇಳೆ ಕಲಿಕಾರ್ಥಿಗಳು ತಮ್ಮ (ತಮ್ಮ ಪ್ರಭಾವವಲಯದಲ್ಲಿ ಏನು ಮಾಡಬಹುದು) ಹಂತದಲ್ಲಿ ಏನು ಮಾಡಬಹುದು ಎಂಬುವ ಅಂಶಗಳು ಬಿಟ್ಟುಹೋಗಿದ್ದಲ್ಲಿ ಸುಗಮಕಾರರು ಆ ಅಂಶಗಳನ್ನು ಸೇರಿಸಿ ಹಂಚಿಕೊಳ್ಳುವರು.